ಪಿಟಕ್ಕನ್ನದೆ ಒಳಕೋಣೆಗೆ ಹೋದರೆ ಗಾದಿಯ ಸುರುಳಿಗಳಿಗೆ ಆನಿಸಿಟ್ಟ ಪೇಪರುಗಳನ್ನು ನೋಡಿ ದಂಗಾದ ರಮೇಶ. ಮಡಿಕೆ ಕೂಡ ಬಿಚ್ಚದ ಹೊಚ್ಚ ಹೊಸ ಪೇಪರುಗಳು ರಾಶಿ ರಾಶಿ ಬಿದ್ದಿವೆ! ಕೈಯಲ್ಲಿ ಮುಟ್ಟಿದ ಗುರುತು ಸಹ ಇಲ್ಲ, ಯಾವುದಕ್ಕೂ! ಪ್ರತಿದಿನ ಇವನ್ನೆಲ್ಲ ಎತ್ತಿಟ್ಟು ಗಾದಿ ಸುರುಳಿ ಹ್ಯಾಗೆ ಬಿಚ್ಚತಾರೋ, ಏನು ಬರೇ ನೆಲದ ಮೇಲೇನೇ ಉರುಳಿಕೋತಾರೋ ಯಾರು ಬಲ್ಲರು? ಎದ್ದ ಪ್ರಶ್ನೆಯನ್ನು ಅಪ್ಪನಿಗೆ ಕೇಳಿ ಉಪಯೋಗವಿಲ್ಲವೆಂದು ತಿಳಿದವ ಯಾವುದೋ ಒಂದು ಪೇಪರು ಹಿಡಿದು ಹೊರಬಂದಾಗ ಅಪ್ಪ ಹುರ್ ಹುರ್ ಎಂದು ಗುಬ್ಬಿಯನ್ನು ಹಾರಿಸುತ್ತಿದ್ದರು. "ಬಹುಶಃ ಸತ್ತ ಮರಿಯ ತಾಯಿಹಕ್ಕಿ ಇರಬೇಕಿದು. ಯಾರು ಸುದ್ದಿ ಹೇಳಿರಬೇಕು ನೋಡಿದಕ್ಕ? ಕರುಳು ಅನ್ನೋದು ಎಲ್ಲಾ ಜೀವಿಗಳಿಗೂ ಇರೋದ ನೋಡು, ಎಲ್ಲಾ ಅವಂದೇ ಮಾಯಾ" ಅಂತ ಮೇಲೆ ಕೈ ಎತ್ತಿ ಮುಗಿದಾಗ ಯಾಕೋ ಅಪ್ಪ ಬೇಕಂದೇ ಈ ಸಲ ಭಾವಾತಿರೇಕದ ಮಾತಾಡುತ್ತಿದ್ದಾರೆ ಅನ್ನಿಸಿ, 'ನಿಮಗೆ ಈ ಪೋಸು ಹೊಂದಂಗಿಲ್ಲ, ಕೈಯಾಗ ರಸೀತಿ ಪುಸ್ತಕ ಹಿಡಕೊಂಡು, ಖರ್ಚಿನ ಟ್ಯಾಲಿ ಮಾಡಕೋತನ ಬರೋಬ್ಬರಿ ಕಾಣತೀರಿ ನೀವು' ಅಂತ ರಮೇಶನಿಗೆ ಒದರಬೇಕೆನಿಸಿತು.

ಮರುದಿನ ಮುಂಜಾನೆ ಆರಕ್ಕೆ ಎದ್ದ ರಾಮರಾಯರು ತಮ್ಮ ಔಷಧಗಳ ಡಬ್ಬಿ, ಧೋತರ ಶರಟುಗಳ ಗಂಟು, ಖಾದಿ ಗ್ರಾಮೋದ್ಯೋಗದ ವಿಶೇಷ ಕಾರ್ಯಕ್ರಮಗಳಿಗೆ ಮಾತ್ರ ಹಾಕುತ್ತಿದ್ದ ತೋಳಿಲ್ಲದ ಜಾಕೀಟು... ಹೀಗೆ ಒಂದೊಂದೇ ಸಾಮಾನು ತಂದು ಪಡಸಾಲಿಯಲ್ಲಿ ಸಾಲಾಗಿ ಜೋಡಿಸುತ್ತಾ ತಾವು ಬರುವ ಸುದ್ದಿಗೆ ಖಾತ್ರಿಯ ಠಪ್ಪಾ ಒತ್ತುತ್ತ ಹೋದಂತೆ ಇವ ಅಸ್ವಸ್ಥನಾಗುತ್ತ ಹೋದ. ಪುಸ್ತಕಗಳ ದೊಡ್ಡ ಹೊತ್ತಿಗೆಯೊಂದನ್ನು ತಂದು ಇಟ್ಟಾಗ ಮಾತ್ರ ತಡೆಯಲಾಗದವನಂತೆ, "ಅಪ್ಪಾ ಮುಂಬೈಯೊಳಗೂ ರಾಮಾಯಣ, ಭಗವದ್ಗೀತಾ ಸಿಕ್ಕೇ ಸಿಗತಾವ. ಭಾಷಾ ಬೇರೆ ಆದರೇನು? ಅಲ್ಲೀ ಬುಕ್ಕಿನಾಗೂ ಇಲ್ಲೀ ಬುಕ್ಕಿನಾಗೂ ತತ್ವ ಒಂದೇ ಇರತಾವ. ಅರ್ಥ ತಿಳೀಬೇಕಷ್ಟ" ಅಂತ ತುಸು ಡೊಂಕಾಗೇ ಅಂದರೆ, ಜೋಕೆಂಬಂತೆ ಅವರು ಖೊಕ್ ಖೊಕ್ ನಕ್ಕರು.

ಪ್ರತಿ ಸಲ ಮುಂಬೈಗೆ ಮರಳುವ ಕೊನೆಯ ಗಳಿಗೆಯಲ್ಲಿ ಅಂದರೆ ಬೂಟು ಕಟ್ಟಿಕೊಳ್ಳುವ ವೇಳೆಯಲ್ಲಿ, "ನೀವೂ ನನ್ನ ಕೂಡ ಈ ಸಲ ಮುಂಬೈಗೆ ಬಂದಿದ್ದರೆ ಆಗ್ತಿತ್ತು ನೋಡ್ರಿ ಅಪ್ಪಾ" ಅಂತ ಇವನನ್ನುವುದು, "ಇರಲಿ ತಗೋ, ಆರಾಮಿದ್ದೇನಲ್ಲಾ ಇನ್ನು ನಾಲ್ಕು ವರ್ಷ ಇರ್ತೇನೆ ಇದs ಮನ್ಯಾಗ" ಅಂತ ಅವರನ್ನುವುದು ರೂಢಿಯಾಗಿತ್ತು. ಆಮೇಲೆ ಮುಂಬೈಗೆ ಮರಳಿದ ಕೂಡಲೇ, "ಈ ಸಲಾನೂ ಅಪ್ಪ ಆ ಮನಿ ಬಿಟ್ಟು ಬರಲಿಕ್ಕೆ ತಯ್ಯಾರಾಗಲಿಲ್ಲ ನೋಡು ನಲೂ, ಅವರಿಗೇನು ನಮ್ಮವ್ವ ಇದ್ದ ಮನೆ, ಮಕ್ಕಳಾಡಿದ ಮನೆ ಅಂತೆಲ್ಲ ಮೋಹದ ಕೊಂಡಿ ಅದ ಅಂತ ತಿಳ್ಕೋಬ್ಯಾಡ ಮತ್ತ. ಮಗನ ಸಂಸಾರ ನೋಡಿ ಹುರುಪಾಗೋ ಜಾಯಮಾನದವರಲ್ಲ, ಅಷ್ಟೇ" ಅಂತ ರಮೇಶ ಹೆಂಡತಿಯ ಬಳಿ ಹೇಳಬೇಕು; ಅವಳು ಅವನ ಕೈಗೆ ಬಿಸಿ ಚಹಾದ ಕಪ್ಪಿಡುತ್ತಾ, "ಹೌದೇನು ಹಂಗ್ಯಾಕ ಅವರಿಗೆ ಯಾರ ಮೇಲೂ ಮಾಯಾ ಇಲ್ಲ? ಮೊದಲಿಂದ ಹಿಂಗೇ ಏನು?" ಅಂತ ಕೇಳಬೇಕು. ಅಂದರೆ ವಿಚಿತ್ರ ಸಮಾಧಾನ ಇವನಿಗೆ.

ಒಮ್ಮೆ ಗಣೇಶ ಚೌತಿಗೆ ಅಪ್ಪನೊಡನೆ ಆದ ಇಂಥಾ ಸಂವಾದ ಕನಿಷ್ಠ ದಸರೆಯವರೆಗೆ ರಮೇಶನಿಗೆ ಗಡದ್ದು ನಿದ್ದೆ ಕೊಡುತ್ತಿತ್ತು; ''ಬರ್ರಿ'' ಅಂತ್ಹೇಳಿ ನಾನಂತೂ ನನ್ನ ಕರ್ತವ್ಯ ಮಾಡಿಬಿಟ್ಟೇನಿ ಅಂತ ನಿರಾಳ ಅವನಿಗೆ. ಮತ್ತೆ ದಸರೆಯ ಅನಂತರ ಡಿಸೆಂಬರಿನಲ್ಲಿ ಅಜ್ಜನ ಶ್ರಾದ್ಧ, ಮಾರ್ಚ್‌ನಲ್ಲಿ ಹೋಳಿಹುಣ್ಣಿವೆ ಹೀಗೆ ಏನಾದರೊಂದು ಊರಿಗೆ ಬರುವ ನಿಮಿತ್ತ; ಮತ್ತದೇ ಸಂಭಾಷಣೆಯ ರಿಪೀಟ್ ಟೆಲಿಕಾಸ್ಟ್; ಮತ್ತೆರಡು ತಿಂಗಳುಗಳ ಮನಃಶಾಂತಿ! ಹೀಗೆಯೇ ವರ್ಷಗಳಿಂದ ನಡೆದು ಬಂದಿತ್ತು. ಆದರೆ, ಇಂದು ಹೀಗೆ ತಾ ಒಮ್ಮೆಲೆ ತಗೊಂಡ ನಿರ್ಧಾರ; ಅದಕ್ಕೆ ಅಪ್ಪನ ಏಕದಂ ಒಪ್ಪಿಗೆ ಎಲ್ಲಾ ಖುದ್ದು ರಮೇಶನಿಗೇ ಖರೆನೋ ಸುಳ್ಳೋ ಎನ್ನುವಂತೆ ಅಯೋಮಯವಾಗಿತ್ತು.